ದಿನಾಂಕಃ 27.11.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ಎಸ್.ಡಿ. ವಕೀಲರಿಂದ:**

ದಿ.14.05.1990 ರ ನೋಂದಾಯಿತ ವಿಭಾಗಪತ್ರವನ್ನು ನಾನು ನೋಡಿದ್ದೇನೆ. ಸದರಿ ವಿಭಾಗಪತ್ರದ ಪ್ರಕಾರ ದಾರದಹಳ್ಳಿ ಗ್ರಾಮದ ಸ.ನಂ.41 ರ ಪೈಕಿ 1 ಎಕರೆ ಜಮೀನು 1 ನೇ ಪ್ರತಿವಾದಿಯ ಹಿಸ್ಸೆಗೆ ಮತ್ತು ಅದೇ ಸರ್ವೇ ನಂಬರ್ ಪೈಕಿ 1 ಎಕರೆ ಜಮೀನು ವಾದಿಯ ತಂದೆ ಚಂದ್ರೇಗೌಡ ಮತ್ತು ವಾದಿಯ ಅಜ್ಜಿ ಲಲಿತಮ್ಮ ರವರ ಜಂಟಿ ಹಿಸ್ಸೆಗೆ ಬಂದಿದೆ ಎಂದರೆ ಸರಿ. ಸದರಿ ಜಮೀನಿನ ಮೇಲೆ ಲಲಿತಮ್ಮ ರವರ ಹಿಸ್ಸೆಗೆ ಸಂಬಂಧಪಟ್ಟಂತೆ ತನ್ನ ಮರಣಾನಂತರ ಆ ಜಮೀನು ವಾದಿಗೆ ಸೇರಬೇಕು ಎಂದು ವಿಲ್ ಬರೆದಿದ್ದಾರೆ ಎಂದರೆ ಸರಿಯಲ್ಲ. ಚಂದ್ರೇಗೌಡ ಮತ್ತು ಲಲಿತಮ್ಮ ಮರಣಾನಂತರ ದಾವ ಜಮೀನಿನ ಖಾತೆ ವಾದಿಯ ಹೆಸರಿಗೆ ದಾಖಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಚಂದ್ರೇಗೌಡ ಮತ್ತು ಲಲಿತಮ್ಮ ರವರ ಹಿಸ್ಸೆಗೆ ಹೋದ 1 ಎಕರೆ ಜಮೀನು ಈಗ ಯಾರ ಹೆಸರಿನಲ್ಲಿ ಇದೆ ಎಂದು ನಾನು ತಿಳಿದುಕೊಂಡಿಲ್ಲ. ಸದರಿ ಜಮೀನಿನಲ್ಲಿ ವಾದಿ ಕೃಷಿ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ವಿಭಾಗಪತ್ರದಂತೆ 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಜಮೀನು ಈಗಲೂ ಸಹಾ ಅವರ ಹೆಸರಿನಲ್ಲಿಯೇ ಇದೆ.

1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ 1 ಎಕರೆ ಜಮೀನಿನ ಪೂರ್ವ ದಿಕ್ಕಿಗೆ ಚಂದ್ರೇಗೌಡ ಮತ್ತು ಲಲಿತಮ್ಮ ರವರ ಹಿಸ್ಸೆಗೆ ಹೋದ 1 ಎಕರೆ ಜಮೀನು ಇದೆ. ಆ ರೀತಿ ಪೂರ್ವ ದಿಕ್ಕಿನಲ್ಲಿ ಇರುವ ಜಮೀನಿನಲ್ಲಿ ಯಾವುದೇ ಕೃಷಿ ಮಾಡಿಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ 1 ಎಕರೆ ಜಮೀನಿನಲ್ಲಿ ಕಾಫೀ ಮತ್ತು ಅಡಿಕೆ ಬೆಳೆ ಇದೆ. ಆ ಜಮೀನಿನಲ್ಲಿ ಸುಮಾರು 10 ವರ್ಷ ಹಳೇಯ ಕಾಫೀ ಗಿಡಗಳು ಇರಬಹುದು. ಸದರಿ ಜಮೀನಿನಲ್ಲಿ ಯಾವುದೇ ಕೃಷಿ ಇಲ್ಲ ಅಲ್ಲಿ ಕಾಡು ಬೆಳೆದಿದೆ ಎಂದರೆ ಸರಿಯಲ್ಲ. ನಿಡಿ-15 ರ ಪೋಟೋದಲ್ಲಿ ಕಾಫೀ ಮತ್ತು ಅಡಿಕೆ ಗಿಡಗಳು ಕಾಣುತ್ತಿಲ್ಲ ಎಂದರೆ ಸರಿಯಲ್ಲ. ದಾವ ಜಮೀನಿನ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಿಪಿ-3 ರ ಪಹಣಿಯ ಪ್ರಕಾರ ದಾವ ಜಮೀನು ವಾದಿಯ ಹೆಸರಿಗೆ ಇದೆ ಎಂದರೆ ಸರಿ. ದಾವ ಜಮೀನಿನ ಪಶ್ಚಿಮ ದಿಕ್ಕಿಗೆ ಸರ್ಕಾರಿ ರಸ್ತೆ ಇದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುವ 1 ಎಕರೆ ಜಮೀನಿನ ಪಶ್ಚಿಮ ದಿಕ್ಕಿಗೆ ಸರ್ಕಾರಿ ರಸ್ತೆ, ದಕ್ಷಿಣ ದಿಕ್ಕಿಗೆ ಡಿ.ಎಲ್. ಅಶೋಕ್ ರವರ ಜಮೀನು ಇದೆ. ದಾವ ಜಮೀನಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.